

■ ರಾಜಕುಮಾರ ಕುಲಕರ್ಣಿ

ಪ್ರೊಫೆಸರ್ ಬದರಿನಾಥ ತಮ್ಮ ಐವತ್ತೆಂಟರ ವಯಸ್ಸಿನಲ್ಲಿ ಇಪ್ಪತ್ತಾರರ ಹರೆಯದ ಹೆಣ್ಣನ್ನು ಮದುವೆಯಾದರೆಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ ಯೂನಿವರ್ಸಿಟಿಯ ಇಡೀ ಕ್ಯಾಂಪಸ್ಸಿನ ತುಂಬ ಕುಳಿತಲ್ಲಿ ನಿಂತಲ್ಲಿ ಚರ್ಚೆಗೆ ಗ್ರಾಸವಾಯಿತು. ಈ ಸುದ್ದಿ ಚರ್ಚೆಗೆ ಗ್ರಾಸವಾಗಲು ಅದು ಬದರಿನಾಥರ ಎರಡನೇ ಮದುವೆ ಎನ್ನುವುದೇ ಬಲವಾದ ಕಾರಣವಾಗಿತ್ತು. ರಿಟೈರ್ಮೆಂಟಿಗೆ ಹತ್ತಿರವಾಗಿರುವ ಈ ವಯಸ್ಸಿನಲ್ಲಿ ಪ್ರೊಫೆಸರ್ ಇದೇನು ಅವಾಂತರ ಮಾಡಿಕೊಂಡರೆಂದು ಕೆಲವರು ಹೀಗಳೆದರೆ, ಇನ್ನು ಕೆಲವರು ಮೊಮ್ಮಕ್ಕಳನ್ನು ಕಂಡಿರುವ ಬದರಿನಾಥರಿಗೆ ದಕ್ಕಿದ ಭಾಗ್ಯ ತಮಗಿಲ್ಲವಲ್ಲ ಎಂದು ಮನಸ್ಸಿನಲ್ಲೆ ಕರುಬಿದರು. ಇದೆಲ್ಲೊ ಹಾರಿಕೆಯ ಸುದ್ದಿಯಾಗಿರಬಹುದೆಂದು ಕೆಲವರು ಉದಾಸೀನರಾಗಿದ್ದವರು ಬೆಚ್ಚಿಬೀಳುವಂತೆ ಪ್ರೊಫೆಸರ್ ಬದರಿನಾಥ ಹೊಸ ಹೆಂಡತಿಯೊಂದಿಗೆ ಯೂನಿವರ್ಸಿಟಿಯ ಕ್ವಾಟ್ರಸ್ಸಿನ ತಮ್ಮ ಮನೆಯಲ್ಲಿ ಅದೊಂದು ಮಟಮಟ ಮಧ್ಯಾಹ್ನ ಹಾಲುಕ್ಕಿಸಿ ಸಂಸಾರ ಶುರು ಮಾಡಿಯೇಬಿಟ್ಟರು. ಹೋದ ವರ್ಷವಷ್ಟೇ ಬದರಿನಾಥರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪೂರ್ಣಗೊಳಿಸಿ ಈಗ ಖಾಸಗಿ ಕಾಲೇಜೊಂದರಲ್ಲಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿರುವ ವಸುಮತಿ ಉಪಾಧ್ಯಾಯ ಎನ್ನುವ ಹೆಣ್ಣು ತನ್ನಪ್ಪನ ವಯಸ್ಸಿನ ಒಕ್ಕಲಿಗರ ವೃದ್ಧನನ್ನು ಮದುವೆಯಾದ ಸಂಗತಿ ಯೂನಿವರ್ಸಿಟಿಯ ಆ ಇಡೀ ಜೀವಸಂಕುಲವನ್ನು ಅಚ್ಚರಿಗೆ ತಳ್ಳಿತ್ತು.

ನಡೆದದ್ದಿಷ್ಟು. ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕಾತಿ ಹೊಂದುವ ವೇಳೆಗಾಗಲೇ ಬದರಿನಾಥರು ಗೃಹಸ್ಥರಾಗಿದ್ದರು. ಅಕಾಡೆಮಿಕ್ಕಾಗಿ ಹೆಂಡತಿ ತಮಗೆ ಸರಿಹೊಂದುವ ಹೆಣ್ಣಲ್ಲವೆಂದು ಅನಿಸಿದರೂ ಅಪ್ಪನಿಗೆ ಎದುರಾಡುವ ಧೈರ್ಯವಿಲ್ಲದೆ ಮದುವೆಗೆ ಒಪ್ಪಿಕೊಂಡಿದ್ದರು. ಯೂನಿವರ್ಸಿಟಿಯ ಪರಿಸರದಲ್ಲಿ ಓಡಾಡುವಾಗ ಸಮಾನಾಂತರ ಹುದ್ದೆಯಲ್ಲಿ ಕೆಲಸ ಮಾಡುವ ದಂಪತಿಗಳು ಕಣ್ಣಿಗೆ ಬಿದ್ದಾಗಲೆಲ್ಲ ತಮ್ಮದು ಇಜ್ಜೋಡು ಎಂದು ಅವರಿಗೆ ಅನಿಸುತ್ತಿತ್ತು. ಡಿಪಾರ್ಟ್‌ಮೆಂಟ್‌ನ ಹಿರಿಯ ಸಹೋದ್ಯೋಗಿಗಳು ‘ಏನ್ರೀ ನೀವು ಎಂ.ಎ, ಪಿಎಚ್.ಡಿ. ಮಾಡಿ ಯಃಕಶ್ಚಿತ್ ಪ್ರೈಮರೀನ ಮದುವೆಯಾಗಿದ್ದೀರಲ್ಲ’ ಎಂದು ಹಾಸ್ಯ ಮಾಡಿದಾಗಲೆಲ್ಲ ಬದರಿನಾಥರಿಗೆ ನೋವಿನ ಮೇಲೆ ಬರೆ ಎಳೆದಂತಾಗುತ್ತಿತ್ತು. ಈ ನಡುವೆ ಮಕ್ಕಳು ಬೆಳೆದು ದೊಡ್ಡವರಾಗಿ ಮೊಮ್ಮಕ್ಕಳಾದರೂ ಹೆಂಡತಿಯ ರೂಪದಲ್ಲಿ ತಮಗೆ ಬೌದ್ಧಿಕ ಸಾಂಗತ್ಯವೊಂದು ಪ್ರಾಪ್ತವಾಗಲೇ ಇಲ್ಲ ಎನ್ನುವ ಬೇಸರ ಆಗಾಗ ಅವರನ್ನು ಕಾಡಿ ಕಂಗೆಡಿಸುತ್ತಿತ್ತು.

ಬದರಿನಾಥರು ಬೌದ್ಧಿಕ ಸಾಂಗತ್ಯವೊಂದರ ಅನ್ವೇಷಣೆಯಲ್ಲಿರುವಾಗಲೇ ನಡೆಯುವ ಕಾಲಿಗೆ ಬಳ್ಳಿ ತೊಡರಿದಂತೆ ವಸುಮತಿ ಅವರ ಬಾಳನ್ನು ಪ್ರವೇಶಿಸಿದಳು. ವಸುಮತಿ ನೋಡಲು ತುಂಬ ಸುಂದರಳಾದ ಹೆಣ್ಣು. ಬೆಳದಿಂಗಳ ಬಣ್ಣದ ದೇಹಕಾಂತಿ, ಒತ್ತಾದ ಕಪ್ಪು ತಲೆಗೂದಲು, ಆಕರ್ಷಕ ಕಪ್ಪು ಕಂಗಳು, ನೀಳ ನಾಸಿಕ, ಪುಟ್ಟ ಬಾಯಿ, ತುಂಬಿದೆದೆಯ ಅವಳನ್ನು ನೆನಪಿಸಿಕೊಂಡು ರಾತ್ರಿಯೆಲ್ಲ ಯೂನಿವರ್ಸಿಟಿಯ ಹುಡುಗರು ಹಾಸಿಗೆಯಲ್ಲಿ ತಮ್ಮ ಮೈ ಬೆಚ್ಚಗಾಗಿಸಿಕೊಳ್ಳುತ್ತಿದ್ದರು. ತರಗತಿಯ ಮೊದಲ ದಿನವೇ ಅವಳನ್ನು ನೋಡಿ ಬದರಿನಾಥರ ಎದೆಯಲ್ಲಿ ಪ್ರೇಮಗೀತೆ ಪಲ್ಲವಿಸತೊಡಗಿತು. ಓದು ಬರಹದಲ್ಲೂ ಜಾಣೆ ಅವಳು. ಎಂ.ಎ. ತರಗತಿಗೆ ಪಾಠ ಮಾಡುತ್ತಿರುವಾಗ ಕೇಳಿದ ಪ್ರಶ್ನೆಗಳಿಗೆ ಕ್ಷಣಮಾತ್ರದಲ್ಲಿ ಉತ್ತರಿಸುತ್ತಿದ್ದ ವಸುಮತಿ ಭವಿಷ್ಯದಲ್ಲಿ ಪಿಎಚ್.ಡಿ ಪ್ರಾಡಕ್ಟೆಂದು ಬದರಿನಾಥರು ಆಗಲೇ ಗುರುತಿಸಿದ್ದರು. ವಸುಮತಿಗೆ ಸಂಶೋಧನೆಯಲ್ಲಿ ಗೈಡ್ ಮಾಡಿದ ಆ ಮೂರು ವರ್ಷಗಳು ಮೂರು ನಿಮಿಷಗಳಂತೆ ಕಳೆದುಹೋಗಿದ್ದವು. ತಾವು ಇಷ್ಟು ದಿನ ಅರಸುತ್ತಿದ್ದ ಬೌದ್ಧಿಕ ಸಾಂಗತ್ಯ ವಸುಮತಿಯ ರೂಪದಲ್ಲಿ ತಮ್ಮ ಬಾಳಿನೊಳಗೆ ಕಾಲಿಡುತ್ತಿದೆ ಎಂದು ಅರಿವಾಗಿ ಬದರಿನಾಥರು ರೋಮಾಂಚನಗೊಂಡರು. ವಸುಮತಿಗೂ ತುಂಬ ಓದಿಕೊಂಡವರೆಂದು ಬದರಿನಾಥರ ಬಗ್ಗೆ ವಿಶೇಷವಾದ ಗೌರವದ